# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 524 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ, ಸಚಿವರು |

| | | |
|---|---|---|
| ಅ) | ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ವಿವಿಧ ಹುದ್ದೆಗಳ ನೇಮಕಾತಿಗಾಗಿ ನಡೆದಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಫಲಿತಾಂಶ ಪ್ರಕಟಿಸುವ ಪ್ರಕ್ರಿಯೆಗಳು ಯಾವ ಹಂತದಲ್ಲಿವೆ; ಈ ಪರೀಕ್ಷೆಗಳ ಫಲಿತಾಂಶ ವಿಳಂಬಕ್ಕೆ ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಈ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಲಾಗುವುದು: | ವಿವಿಧ ನಿಗಮ ಮಂಡಳಿಗಳ ಹುದ್ದೆಗಳ ನೇರ ನೇಮಕಾತಿಗಾಗಿ ಪರೀಕ್ಷೆಗಳನ್ನು 2023ನೇ ಸಾಲಿನ ಅಕ್ಟೋಬರ್ 28, 29 ಮತ್ತು ನವೆಂಬರ್ 18 ರಿಂದ 25 ರವರೆಗೆ ನಡೆಸಲಾಯಿತು. ಸುಮಾರು 08 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಮೌಲ್ಯಮಾಪನ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು ಫಲಿತಾಂಶವನ್ನು ಫೆಬ್ರುವರಿ ಮಾಹೆಯ ಕೊನೆಯ ವಾರದಲ್ಲಿ ಪ್ರಕಟಿಸಲಾಗುವುದು. |
| ಆ) | ಕರ್ನಾಟಕ ಲೋಕ ಸೇವಾ ಆಯೋಗವು ಕಾಲಕಾಲಕ್ಕೆ ವಿವಿಧ ಪರೀಕ್ಷೆಗಳ ನೇಮಕಾತಿ ಪ್ರಕ್ರಿಯೆಗಳು ಯಾವ ಹಂತಗಳಲ್ಲಿ ಇವೆ ಎಂಬುದರ ಬಗ್ಗೆ ಪ್ರಕಟಣೆಯನ್ನು ಹೊರಡಿಸುತ್ತದೆ: ಇದೇ ರೀತಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕೂಡ ಯಾವ ಯಾವ ಪರೀಕ್ಷೆಯ ನೇಮಕಾತಿ ಪ್ರಕ್ರಿಯೆಯು ಯಾವ ಹಂತದಲ್ಲಿವೆ ಎಂಬುದನ್ನು ಪ್ರಕಟಣೆ ಮೂಲಕ ತಿಳಿಸಬಹುದುದಲ್ಲವೇ: ಮಾಹಿತಿ ನೀಡುವುದು; | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಿದ ಎಲ್ಲಾ ನೇಮಕಾತಿ ಪರೀಕ್ಷೆಗಳ ಪ್ರಕ್ರಿಯೆಯು ಮೆರಿಟ್ ಪಟ್ಟಿ ಹಾಗೂ ಆಯ್ಕೆ ಪಟ್ಟಿ ಪ್ರಕಟಣೆ ಸೇರಿದಂತೆ ಪೂರ್ಣಗೊಂಡಿರುತ್ತದೆ.<br><br>ಹಾಲಿ ವಿವಿಧ ನಿಗಮ ಮಂಡಳಿಗಳ ನೇಮಕಾತಿ ಪ್ರಕ್ರಿಯೆ ಫಲಿತಾಂಶ ಮಾತ್ರ ಪ್ರಕಟಣೆಯ ಹಂತದಲ್ಲಿದೆ. |

| | | |
|---|---|---|
| ಇ) | ಇತ್ತೀಚೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಿರುವ 545 ಪಿ.ಎಸ್.ಐ ಮತ್ತು ಕೆ-ಸೆಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ತರ್ಜುಮೆ ಸೇರಿದಂತೆ ಸಾಕಷ್ಟು ಲೋಪಗಳಿದ್ದು, ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆಗಳು ಗುಣಮಟ್ಟದ್ದಾಗಿರಲಿಲ್ಲವೆಂಬುದನ್ನು ಅಭ್ಯರ್ಥಿಗಳು ಆಕ್ಷೇಪವೆತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೆಸೆಟ್ ಪ್ರಶ್ನೆ ಪತ್ರಿಕೆಗಳನ್ನು ಯುಜಿಸಿ ನೆಟ್ ನಿಯಮಾವಳಿಗಳ ಅನುಸಾರ ವಿಷಯ ತಜ್ಞರ ಸಮಿತಿಗಳನ್ನು ರಚಿಸಿ, ಸಿದ್ಧಪಡಿಸಲಾಗಿದ್ದು ಪ್ರಶ್ನೆಗಳಲ್ಲಾಗಲಿ ತರ್ಜುಮೆಯಲ್ಲಾಗಲಿ ಯಾವುದೇ ಲೋಪಗಳು ಕಂಡುಬಂದಿರುವುದಿಲ್ಲ.<br><br>ಪಿಎಸ್ಐ ಪ್ರಶ್ನೆ ಪತ್ರಿಕೆಯನ್ನು ಸಹ ಪರಿಣಿತರಿಂದ ಸಿದ್ಧಪಡಿಸಲಾಗಿದ್ದು ಯಾವುದೇ ಲೋಪವಿರುವುದು ಕಂಡುಬಂದಿರುವುದಿಲ್ಲ. |
| ಈ) | ಬಂದಿದ್ದಲ್ಲಿ ಪರೀಕ್ಷಾ ಪ್ರಾಧಿಕಾರವು ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸುವ ತಜ್ಞರ ಕೊರತೆಯನ್ನು ಎದುರಿಸುತ್ತಿದೆಯೇ: (ಸ್ಪಷ್ಟ ವಿವರವನ್ನು ನೀಡುವುದು) | ಅಂತಹ ಯಾವುದೇ ತಜ್ಞರ ಕೊರತೆ ಇರುವುದಿಲ್ಲ. |
| ಉ) | ಮುಂಬರುವ ಪರೀಕ್ಷೆಗಳಲ್ಲಿ ಇಂತಹ ಲೋಪ ದೋಷಗಳು ಮರುಕಳಿಸದಂತೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? (ಮಾಹಿತಿಯನ್ನು ಒದಗಿಸುವುದು) | ಉದ್ಭವಿಸುವುದಿಲ್ಲ. |

**ಇಡಿ 60 ಟಿಇಸಿ 2024**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು
**Dr M.C SUDHAKAR M.D.S.**
**Minister for Higher Education**